ಅನುಮತಿ ಪಡೆಯುವ ಪೂರ್ವದಲ್ಲಿ ಒದಗಿಸಬೇಕಾದ ಸಿಸಿಗಳನ್ನು ನೆಡುವ ಬಗ್ಗೆ ಠೇವಣಿ, ಭದ್ರತಾ ಠೇವಣಿಗಳನ್ನು ಉಳಿತಾಯದ ಪತ್ರಗಳ ರೂಪದಲ್ಲಿ ಸಲ್ಲಿಸದೇ ಇರುವ ಪ್ರಯುಕ್ತ ಬಾಕಿ ಇವೆ.

ಇ) ದಿನಾಂಕ 01-07-2005 ರಿಂದ 31-10-2005ರವರೆಗೆ ಮಳೆಗಾಲದ ಅವಧಿಯಾಗಿರುವುದರಿಂದ, ಮರಗಳ ಕಡಿತಲೆಗೆ ಅನುಮತಿಯನ್ನು ನಿಷೇಧಿಸಲಾಗಿದೆ. ದಿನಾಂಕ 01-11-2005ರಿಂದ ಮರಗಳ ಕಡಿತಲೆಗೆ ಅನುಮತಿ ನೀಡಲಾಗುವುದು.

4776(5639) **ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ 100 ಎಂ.ಎಲ್. ಸಾರಾಯಿ ಮಾರಾಟದ ಬೆಲೆಯನ್ನು ಸರ್ಕಾರ ನಿಗದಿ ಮಾಡಿದೆಯೇ ; ಹಾಗಿದ್ದಲ್ಲಿ ಎಷ್ಟು ;

ಆ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ 100 ಎಂ.ಎಲ್. ಸಾರಾಯಿ ಪ್ಯಾಕೇಟನ್ನು 12 ರಿಂದ 14 ರೂ.ಗೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಬಂದಿದ್ದಲ್ಲಿ ಇದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಈ) ತಾಲ್ಲೂಕಿನಲ್ಲಿ ಪ್ಯಾಕೇಟಿನಲ್ಲಿ ಸಾರಾಯಿ 100 ಎಂ.ಎಲ್. ಗಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಅಳತೆ ಸರಿ ಇದೆಯೊ ಇಲ್ಲವೊ ಎಂದು ತಿಳಿದುಕೊಳ್ಳಲು ಕಳೆದ ಸಾಲಿನಲ್ಲಿ ಎಷ್ಟು ತಪಾಸಣೆಗಳನ್ನು ನಡೆಸಲಾಗಿದೆ ; (ವಿವರ ನೀಡುವುದು) ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಹೌದು, ರಾಜ್ಯದಲ್ಲಿ 100 ಎಂ.ಎಲ್. ಸಾರಾಯಿ ಮಾರಾಟದ ಬೆಲೆಯನ್ನು ರೂ. 11-50ಕ್ಕೆ ನಿಗದಿಪಡಿಸಲಾಗಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಈ) ಇಲ್ಲ.

ಉ) ತೀರ್ಥಹಳ್ಳಿಯಲ್ಲಿ 25 ಸಾರಾಯಿ ಅಂಗಡಿಗಳ ತಪಾಸಣೆ ಮಾಡಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅನುಬಂಧ

2004–05ನೇ ಸಾಲಿನಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಾರಾಯಿ ಅಂಗಡಿಗಳನ್ನು ತಪಾಸಣೆ ಮಾಡಿದ ವಿವರಗಳು

ಕ್ರ.ಸಂ.	ತಪಾಸಣೆ ನಡೆಸಿದ ದಿನಾಂಕ	ಸಾರಾಯಿ ಅಂಗಡಿಯ ಹೆಸರು
1	18–06–2005	ರಂಜದ ಕಟ್ಟೆ
2	18–06–2005	ಲಕ್ಕುಂದ
3	18–06–2005	ಮೇಗರವಳ್ಳಿ
4	18–06–2005	ಕೊಳಗಿ
5	18–06–2005	ಹೊಸೂರು
6	20–06–2005	ಸೊಪ್ಪುಗುಡ್ಡೆ
7	20–06–2005	ಸೀಬಿನಕೆರೆ
8	20–06–2005	ಬಸ್‌ಸ್ಟಾಂಡ್
9	20–06–2005	ಅಜಾದ್ ರಸ್ತೆ
10	20–06–2005	ಕುರುವಳ್ಳಿ
11	25–06–2005	ಗುಡ್ಡೆಕೊಪ್ಪ
12	25–06–2005	ಕೋಣಂದೂರು
13	25–06–2005	ಹಿರೇಗದ್ದೆ
14	25–06–2005	ದೇಮ್ಲಾಪುರ
15	25–06–2005	ಯೋಗೀಮಳಲಿ
16	28–06–2005	ಒಡಲಮನೆ
17	28–06–2005	ಕುಡುಮಲ್ಲಿಗೆ
18	28–06–2005	ಬೆಜ್ಜವಳ್ಳಿ
19	28–06–2005	ತೊದೂರು
20	28–06–2005	ಲಿಂಗಾಪುರ
21	28–06–2005	ಕಣಗಲಕೊಪ್ಪ
22	29–06–2005	ದೇವಂಗಿ
23	29–06–2005	ಬೆಕ್ಕನೂರು
24	29–06–2005	ಬಸವಾನಿ
25	29–06–2005	ಶೇಡ್ಗಾರು